# ಭಾರತೀಯ ವಿಜ್ಞಾನ ಸಂಸ್ಥೆ

**ಬೆಂಗಳೂರು 560012**

ಉಲ್ಲೇಖ : ಜಿಡಿ/ಐಪಿ/2020-21 7ನೇ ಆಗಸ್ಟ್, 2020

**ಸ್ವಾತಂತ್ರ್ಯ ದಿನಾಚರಣೆ**

2020 ಆಗಸ್ಟ್ 15ರ ಶನಿವಾರದಂದು ಬೆಳಿಗ್ಗೆ 8.30ಕ್ಕೆ ಸಂಸ್ಥೆಯ ಮುಖ್ಯ ಕಟ್ಟಡದ ಎದುರು ನಿರ್ದೇಶಕರು ರಾಷ್ಟ್ರಧ್ವಜ ಆರೋಹಣ ಮಾಡಲಿದ್ದಾರೆ. ಪ್ರಸಕ್ತ ಕೋವಿಡ್-19 ಸೋಂಕಿನ ಪರಿಸ್ಥಿತಿಯಲ್ಲಿ ವೈದ್ಯರು, ನರ್ಸ್‌ಗಳು, ಭದ್ರತಾ ಸಿಬ್ಬಂದಿ ಹಾಗೂ ಸ್ವಚ್ಛತಾ ಸಿಬ್ಬಂದಿಗಳು ಸಲ್ಲಿಸುತ್ತಿರುವ ಅಮೂಲ್ಯ ಸೇವೆ ಗುರುತಿಸಲು, ಇವರೆಲ್ಲರನ್ನು ಕಾರ್ಯಕ್ರಮಕ್ಕೆ ವೈಯಕ್ತಿಕವಾಗಿ ಆಮಂತ್ರಿಸಲಾಗಿದೆ. ವಿವಿಧ ವಿಭಾಗ/ವರ್ಗ/ಪ್ರಯೋಗಾಲಯ/ಘಟಕ/ಕೇಂದ್ರಗಳ ಅಧ್ಯಕ್ಷರು/ಮುಖ್ಯಸ್ಥರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸಮಾರಂಭದಲ್ಲಿ ಭಾಗವಹಿಸಲು ಕೋರಲಾಗಿದೆ. ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರ ಮಾಡಲಾಗುವುದು.

**ಕಾರ್ಯಕ್ರಮ:**

| | | |
|---|---|---|
| ಬೆಳಿಗ್ಗೆ 8.30 | : | ನಿರ್ದೇಶಕರಿಂದ ಧ್ವಜಾರೋಹಣ |
| | | ರಾಷ್ಟ್ರಗೀತೆ |

ಭಾಷಣ :

| | |
|---|---|
| ಇಂಗ್ಲಿಷ್ | : ಪ್ರೊ. ಜಿ. ರಂಗರಾಜನ್, ನಿರ್ದೇಶಕರು, ಐಐಎಸ್‌ಸಿ |
| ಕನ್ನಡ | : ಡಾ. ರಾಮಚಂದ್ರ ಎಸ್.ಜಿ., ಸಿಆರ್‌ಎಸ್, ಸಿಎಎಫ್ |
| ಹಿಂದಿ | : ಪ್ರೊ. ಸತ್ಯಂ ಸುವಾಸ್, ಪ್ರಾಧ್ಯಾಪಕರು, ಮೆಟೀರಿಯಲ್ ಎಂಜಿನಿಯರಿಂಗ್ |
| ಸಾಂಸ್ಕೃತಿಕ ಕಾರ್ಯಕ್ರಮ | : ರಿದ್ಮಿಕಾ, ಐಐಎಸ್‌ಸಿ ಅವರಿಂದ (ಪೂರ್ವ ಮುದ್ರಿತ) |

ದಯವಿಟ್ಟು ಗಮನಿಸಿ:

1. ಕಾರ್ಯಕ್ರಮಕ್ಕೆ ಆಮಂತ್ರಿಸಲಾದ ವೈದ್ಯರು, ನರ್ಸ್‌ಗಳು, ಭದ್ರತಾ ಸಿಬ್ಬಂದಿ ಹಾಗೂ ಸ್ವಚ್ಛತಾ ಸಿಬ್ಬಂದಿಗಳು (ಹೌಸ್ ಕೀಪಿಂಗ್) 2020 ಆಗಸ್ಟ್ 15ರಂದು ಬೆಳಿಗ್ಗೆ 8.25ಕ್ಕೆ ಮುಖ್ಯ ಕಟ್ಟಡದ ವೇದಿಕೆ ಬಳಿ ಹಾಜರಿರಲು ಕೋರಲಾಗಿದೆ.
2. ಮುಖ್ಯ ಕಟ್ಟಡದಲ್ಲಿನ ಕಾರ್ಯಕ್ರಮದ ವೇದಿಕೆಗೆ ಆಮಂತ್ರಣ ಪಡೆದವರು ತಪ್ಪದೇ ಮುಖಗವಸು ಧರಿಸಬೇಕು; ಸಾಮಾಜಿಕ ಅಂತರ ಪಾಲಿಸಬೇಕು.
3. ಕಾರ್ಯಕ್ರಮದ ನೇರ ಪ್ರಸಾರ (ಲೈವ್ ಸ್ಟ್ರೀಮಿಂಗ್) ಲಿಂಕ್ ಅನ್ನು ಶೀಘ್ರ ನೀಡಲಾಗುವುದು.
4. ಕಾರ್ಯಕ್ರಮದ ನಂತರ ಸಿಹಿತಿಂಡಿ ವಿತರಣೆ ಇರುವುದಿಲ್ಲ.

Hari kvs

ಕುಲಸಚಿವರು

Kuchibhotla Venkata Subrahmanya Hari
Digitally signed by Kuchibhotla Venkata Subrahmanya Hari
Date: 2020.08.10 18:16:09 +05'30'

ಪ್ರತಿಗಳು

ಅಧ್ಯಕ್ಷರು/ಮುಖ್ಯಸ್ಥರು

ವಿಭಾಗಗಳು/ಪ್ರಯೋಗಾಲಯಗಳು/ಕೇಂದ್ರಗಳು/ಘಟಕಗಳು/ವರ್ಗಗಳು

ಆಡಳಿತ ವಿಭಾಗದ ಎಲ್ಲ ಅಧಿಕಾರಿಗಳು

ಎಲ್ಲ ಸಂಘಗಳು/ ಸಿಬ್ಬಂದಿ ಕ್ಲಬ್/ ಜಿಮ್ ಖಾನ/ ಟಿಎಂಸಿ.